MYSORE LEGISLATIVE ASSEMBLY.

FORTY-FIRST DAY.

Wednesday, the 24th June 1964.

The House met in the Assembly Hall, Vidhana Soudha, Bangalore, at Thirty Minutes past Twelve of the Clock.

MR. SPEAKER [SRI B. VAIKUNTA BALIGA, B.A., B.L.] in the Chair.

STARRED QUESTIONS

(to which oral answers were given)

The Renditta of Silk Yarn of Different Denier produced in Government Silk Filatures in the State.

*Q.—441. **Sri S. KARIAPPA** (Kanakapura).—

Will the Government be pleased to state :—

(*a*) the renditta of silk yarn of different denier produced in Government Silk Filatures in the State (details may please be furnished year-wise for the past three years) ;

(*b*) the renditta of different denier in private silk filatures ;

(*c*) the renditta of different denier in countries like Japan and Italy ;

(*d*) the position of the same in Bihar, Kashmir and Bengal and other States ?

A.—**Sri B. RACHIAH** (Minister for Forests and Fisheries).—

(*a*) Renditta for the past three years :—

	1960-61	1961-62	1962-63
Government Silk Filature, Kollegal ...	19.88	20.89	21.00
Government Silk Filature, Kanakapura ...	17.31	17.19	19.5
Government Silk Filature, Mysore ...	19.14	21.31	21.13

(*b*) It is ascertained that it varies between 14 and 16 depending on the Season.

(SRI B. RACHIAH)

(*c*) The average renditta in Japan for the popular denier silk of 20/22 for the spring crop is said to be 6, while for the the autumn crop it varies between 7 and 9. In Italy the renditta for the popular denier is reported to be about 10.

(*d*) In Bihar there is no mulberry Sericulture and no reeling of mulberry cocoons. In Bengal there are no filatures at all and even for the Charka the average renditta there is said to be about 18. In Kashmir Univeltine worms are reared and the renditta is said to vary between 11 and 14.

Mulberry silk is not practised on large scales in other States.

Sri B. RACHIAH.—I would like to correct the answer by giving the latest figures which are audited :

	1960-61	1961-62	1962-63
Government Silk Filature, Kollegal : ...	19.9	20.9	21
Government Silk Filature, Kanakapura ...	17.2	17.0	19.5
Government Silk Filature, Mysore ...	19.27	21.33	21.44

ಶ್ರೀ ಎಸ್. ಕರಿಯಪ್ಪ.—ಇಂಡಿಯಾ ಗವರ್ನಮೆಂಟಿನವರು ಕಕೂನಿಗೆ ಪ್ರಥಮತಃ ಯಾವಾಗ ಪ್ರೊಜೆಕ್ಷನ್ ಕೊಟ್ಟರು ?

ಶ್ರೀ ಬಿ. ರಾಚಯ್ಯ.—ನವಾರು 1936ರಲ್ಲಿ ಎಂದು ನನಗೆ ಜ್ಞಾಪಕವಿದೆ.

ಶ್ರೀ ಎಸ್. ಕರಿಯಪ್ಪ.—ಈ 31 ವರ್ಷ ಕಾಲದಲ್ಲಿ ರೆಂಡಿಟ್ಟಾ ಎಷ್ಟರಮಟ್ಟಿಗೆ ಇಂಪ್ರೂವ್ ಆಗಿದೆ ? ಆಗ ಹೇಗಿತ್ತು ? ಅದಕ್ಕೂ ಇದಕ್ಕೂ ಹೇಗೆ ಕಂಪೇರ್ ಆಗುತ್ತದೆ ?

ಶ್ರೀ ಬಿ. ರಾಚಯ್ಯ.—ಆಗ ಹೊನದರಲ್ಲಿ ಬಹಳ ಚೆನ್ನಾಗಿ ಹಿಪ್ಪನೇರಳೆ ಬೆಳೆಯುತ್ತಾ ಇದ್ದರು. ಈಗ ಜಾಸ್ತಿ ಮಳೆ ಆಶ್ರಯದಲ್ಲಿ, ಹೆಚ್ಚಿಗೆ ಗೊಬ್ಬರಗಳನ್ನು ಹಾಕದಿರುವುದರಿಂದ ಉತ್ಪಾದನೆ ಕಡಮೆಯಾಗುತ್ತಾ ಬಂದಿದೆ. ರೆಂಡಿಟ್ಟಾ ಕಡಮೆಯಾಗುತ್ತಾ ಬಂದಿದೆ.

ಶ್ರೀ ಎಸ್. ಕರಿಯಪ್ಪ.—1931ರಲ್ಲಿ ಎಷ್ಟಿತ್ತು ?

ಶ್ರೀ ಬಿ. ರಾಚಯ್ಯ.—ತಕ್ಷಣ ಹೇಳುವುದಕ್ಕಾಗುವುದಿಲ್ಲ. ಆಮೇಲೆ ಬೇಕಾದರೆ ಕೊಡುತ್ತೇನೆ.

ಶ್ರೀ ಎಸ್. ಕರಿಯಪ್ಪ.—ಮೂರು ವರ್ಷಗಳ ಹಿಂದೆ ರೆಂಡಿಟ್ಟಾ ಸ್ವಲ್ಪ ಮೇಲಾಗಿತ್ತಲ್ಲವೆ ? ಈ 3 ವರ್ಷಗಳಲ್ಲಿ ಬಹಳ ಕೆಟ್ಟು ಹೋಗಿದೆಯಲ್ಲವೆ ?

ಶ್ರೀ ಬಿ. ರಾಚಯ್ಯ.—ಈ 3 ವರ್ಷಗಳ ಫಿಗರ್ಸೆ ಫರ್ನಿಶ್ ಮಾಡಿರುವ ಪ್ರಕಾರ ಎಲ್ಲೋ ಸ್ವಲ್ಪ ಡೆಸಿಮರ್‌ನಲ್ಲಿ ವ್ಯತ್ಯಾಸವಿದೆ. ಕಾರಣವೇನೆಂದರೆ ಇತ್ತೀಚೆಗೆ ಕಕೂನ್ ಮಾರ್ಕೆಟ್ಟುಗಳು ಸ್ಥಾಪನೆಯಾದಮೇಲೆ, ಪ್ರೈವೇಟ್ ರೀಲರ್ಸ್ ಆಯಾ ಸ್ಥಳಕ್ಕೆ ಹೋಗಿ ಒಳ್ಳೆಯ ಗೂಡುಗಳನ್ನು ಸೆಲೆಕ್ಟ್ ಮಾಡುತ್ತಾ ಇದ್ದಾರೆ. ನಮ್ಮ ಅಧಿಕಾರಿಗಳಿಗೆ ಆ ಅವಕಾಶವಾಗಿಲ್ಲ. ವರ್ಕ್ಸಿಗೆ ಇನ್‌ಸೆಂಟೀವ್ ಬೋನಸ್ ಕೊಡುವುದರಿಂದ, ಅವರು ಉತ್ಪನ್ನ ಹೆಚ್ಚು ಮಾಡಬೇಕೆಂಬ ದೃಷ್ಟಿಯಿಂದ, ಕೆಲವು ಸಂದರ್ಭದಲ್ಲಿ, ರೀಲ್ ಮಾಡದೆ ಇರುವ ಕಕೂನನ್ನು, ರಿಜೆಕ್ಟ್ ಆದ ಕಕೂನನ್ನು ಹಾಗೇ ಸೇರಿಸುತ್ತಾ ಇದ್ದಾರೆ. ಇದೂ ಸ್ವಲ್ಪಮಟ್ಟಿಗೆ ಕಾರಣವಾಗಿದೆ.

ಶ್ರೀ ಎಸ್. ಕರಿಯಪ್ಪ.—ಈ ರೆಂಡಿಟ್ಟಾ, 1960-61, 1961-62, 1962-63 ಈ 3 ವರ್ಷಗಳಿಗಿಂತಲೂ ಹಿಂದೆ ಸ್ವಲ್ಪ ಉತ್ತಮವಾಗಿತ್ತಲ್ಲವೆ ?

ಶ್ರೀ ಬಿ. ರಾಚಯ್ಯ.—ಹೌದು.

ಶ್ರೀ ಎಸ್. ಕರಿಯಪ್ಪ.—ಈಚೀಚೆಗೆ ಈ ರೀತಿ ಕುಲಗೆಟ್ಟು ಹೋಗುವುದಕ್ಕೆ ಕಾರಣವೇನು ?

ಶ್ರೀ ಬಿ. ರಾಚಯ್ಯ.—ಈಗ ಹೆಚ್ಚಾಗಿ ಕಕೂನ್ ಮಾರ್ಕೆಟ್ಟುಗಳು ಆದಮೇಲೆ ನಮ್ಮ ಆಫೀಸರುಗಳು ಹೋಗಿ ಪ್ರೈವೇಟಾಗಿ ಕೊಂಡುಕೊಂಡು ಬರುವುದಿಲ್ಲ. ಎಷ್ಟು ಕಕೂನ್ ಮಾರ್ಕೆಟ್ಟಿಗೆ ಬರುತ್ತದೆ, ಅದರಮೇಲೆ ಬಿಡ್ ಮಾಡಿ ಕೊಂಡುಕೊಳ್ಳುತ್ತಾರೆ ಪ್ರೈವೇಟ್ ರೀಲರುಗಳು ರೇರ್ ಮಾಡುವ

ಸ್ಥಳಕ್ಕೇ ಹೋಗಿ, ನೋಡಿಕೊಂಡು, ಅದಕ್ಕೆ ತಕ್ಕಹಾಗೆ ಬೆಲೆಯನ್ನು ಆಫರ್ ಮಾಡುತ್ತಾರೆ. He is in a better advantageous position than our officers.

ಶ್ರೀ ಎಸ್. ಕಠಿಯಪ್ಪ.—ಟ್ಯಾರೀಫ್ ಕಮಿಷನ್ ಎಷ್ಟು ದಿವಸದಲ್ಲಿ ಬಂದು ಈ ವಿಷಯವನ್ನು ಚರ್ಚೆಮಾಡಿಕೊಂಡು ಹೋಗಿದೆ ?

ಶ್ರೀ ಬಿ. ರಾಚಯ್ಯ.—ಅವರು ಆಗಲೇ ಶಿಫಾರಸ್ಸು ಮಾಡಿ, ಇನ್ನೂ 3 ವರ್ಷ ಪ್ರೊಟೆಕ್ಷನ್ ಕೊಟ್ಟಿದ್ದಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—ಮಾನ್ಯ ಮಂತ್ರಿಗಳು ಇತ್ತೀಚೆಗೆ ಜಪಾನಿಗೆ ಹೋದಾಗ, ಅಲ್ಲ ಹೊಸದಾಗಿ ಬೆಳೆಯತಕ್ಕ ಯಾವುದಾದರೂ ಪ್ರದೇಶವನ್ನು ನಂದರ್ಶಿಸಿ ಅಲ್ಲಿರತಕ್ಕಂಥ ರೆಂಡಿಟ್ಟಾದ ಪ್ರಮಾಣವೆಷ್ಟು ಎಂದು ತಿಳಿದುಕೊಂಡು ಬಂದಿದ್ದಾರೆಯೆ ?

ಅಧ್ಯಕ್ಷರು.—ದೊಡ್ಡ ರಿಪೋರ್ಟು ಕೊಟ್ಟಿದ್ದಾರೆ. ಎಲ್ಲಾ ಮೆಂಬರುಗಳಿಗೂ ಕೊಡಿ.

ಶ್ರೀ ಟಿ. ಮಾದಯ್ಯ ಗೌಡ.—ಮಾರ್ಕೆಟುಗಳು ನ್ಯಾಷನಲೈಸಾದಮೇಲೆ, ಬೆಸ್ಟ್ ಕಕೂನ್ಸ್ ಕೊಂಡುಕೊಂಡು ಬರುತ್ತಾ ಇದ್ದರೂ ಕೂಡ ರೆಂಡಿಟ್ಟಾ ಜಾಸ್ತಿ ಯಾಗದೆ, ಕಡಿಮೆಯಾಗುವುದಕ್ಕೆ ಕಾರಣವೇನು ? ಮಲ್ಬರಿ ಚೆನ್ನಾಗಿ ಬೆಳೆಯದಿರುವುದಲ್ಲದೆ ಸರಿಯಾದ ಮೇಲ್ವಿಚಾರಣೆ ಇರದಿರುವುದೂ ಒಂದು ಬಲವತ್ತರವಾದ ಕಾರಣವೆನ್ನುವುದನ್ನು ಸರಕಾರದವರು ಮನಗಂಡಿದ್ದಾರೆಯೆ ?

ಶ್ರೀ ಬಿ. ರಾಚಯ್ಯ.—ಇದರಲ್ಲಿ ಮುಖ್ಯವಾಗಿ ರೇಷ್ಮೆ ಬೆಳೆಗೆ ಅಗತ್ಯವಾಗಿ ಎಷ್ಟು ಅಟೆನೆಷನ್ ಕೊಡಬೇಕೋ ಅಷ್ಟನ್ನು ರೈತರು ಕೊಡುತ್ತಿಲ್ಲ. ಇಲಾಖೆಯಲ್ಲಿಯೂ ಸಾಕಷ್ಟು ಪರಿಣಾಮಕಾರಿಯಾದ ಬದಲಾವಣೆಗಳನ್ನು ಮಾಡಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ.—ಜಪಾನ್ ದೇಶದ, ಇಟಲಿ ದೇಶದ ಅವರೇಜ್ ರೆಂಡಿಟ್ಟಾ ಕೊಟ್ಟಿದ್ದೀರ. ನಮ್ಮ ದೇಶದಲ್ಲಿ ಉತ್ಪಾದನೆಯಾಗತಕ್ಕಂಥ ಅವರೇಜ್ ರೆಂಡಿಟ್ಟಾ ಎಷ್ಟು ಎಂದು ತಿಳಿಸುವುದಕ್ಕಾಗುತ್ತದೆಯೆ ?

ಶ್ರೀ ಬಿ. ರಾಚಯ್ಯ.—ನಮ್ಮ ದೇಶದಲ್ಲಿ ಪ್ರೈವೇಟ್ ರೀಲರುಗಳನ್ನು ತೆಗೆದುಕೊಂಡು ನೋಡಿದರೆ, 14ರಿಂದ 18ರವರೆಗೆ ಇದೆ.

Mr. SPEAKER.—Does the word 'desha' mean this State or the entire Indian Republic ?

Sri D. M. SIDDIAH.—I asked the Hon'ble Minister to give average renditta of silk produced in the Mysore State.

Sri B. RACHIAH.—The average will be 18.

ಶ್ರೀ ಟಿ. ಮಾದಯ್ಯ ಗೌಡ.—ರೈತರ ಅಜಾಗರೂಕತೆಯಿಂದ ಈ ರೆಂಡಿಟ್ಟಾ ಕಡಿಮೆ ಮಾಡುವುದಕ್ಕೆ ಆಗಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಹಾಗಾದರೆ ಇಲಾಖೆಯವರು ರೈತರಿಗೆ ಸರಿಯಾದ ತಿಳಿವಳಿಕೆ ಕೊಟ್ಟು ಅವರ ತಿಳಿವಳಿಕೆಯ ಮಟ್ಟವನ್ನು ಜಾಸ್ತಿ ಮಾಡಿ ಅವರು ಉತ್ತಮವಾದ ರೇಷ್ಮೆಯನ್ನು ಬೆಳೆಯುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ತೆಗೆದುಕೊಂಡಿದ್ದೇವೆ. ಇನ್ನೂ ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ ಎಂದು ಆಗಲೇ ಹೇಳಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾವು ಶಾಸನ ಸಭೆಯ ಸದಸ್ಯರಾಗಿದ್ದಾಗ ಈ ರೇಷ್ಮೆ ವಿಷಯದಲ್ಲಿ ಬಹಳವಾಗಿ ಪ್ರಶ್ನೆಗಳನ್ನು ಹಾಕುತ್ತಾ ಇದ್ದಿರಿ ಮತ್ತು ಬಹಳ ಚೆನ್ನಾಗಿ ವಿವರಿಸುತ್ತಾ ಇದ್ದಿರಿ. ತಾವು ಮಂತ್ರಿಗಳಾಗಿ ಅಧಿಕಾರಕ್ಕೆ ಬಂದ ಮೇಲೆ ಹಿಂದೆ ಇದ್ದಂತಹ ರೆಂಡಿಟ್ಟಾ ಪರ್ಸೆಂಟೇಜ್ ಎಷ್ಟು ಕಡಿಮೆ ಯಾಗಿದೆ ಎಂಬುದನ್ನು ಹೇಳುತ್ತೀರಾ ?

Mr. SPEAKER.—It is disallowed.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಟಲಿಯಲ್ಲಿರುವುದು ಬಹಳ ಸುಪ್ರಸಿದ್ಧವಾದ ರೇಷ್ಮೆ ಆ ಮಟ್ಟಕ್ಕೆ ನಮ್ಮ ರೆಂಡಿಟ್ಟಾ ತರುವುದಕ್ಕೆ ಯಾವ ಕಾರ್ಯಕ್ರಮವನ್ನು ಸರ್ಕಾರ ಕೈಕೊಂಡಿದೆ ?

ಶ್ರೀ ಬಿ. ರಾಚಯ್ಯ.—ಹಿಪ್ಪನೇರಳೆಯ ಬೆಳೆಯನ್ನು ಉತ್ತಮ ಪಡಿಸುವುದಕ್ಕೆ ಒಳ್ಳೆಯ ತಳಿಯ ಕಡ್ಡಿಗಳನ್ನು ರೈತರಿಗೆ ಒದಗಿಸಬೇಕೆಂದು ಅವುಗಳನ್ನು ನಮ್ಮ ಫಾರಂಗಳಲ್ಲಿ ಇಟ್ಟುಕೊಂಡಿದ್ದೇವೆ. ಅವುಗಳನ್ನು ಪೂರ್ಣವಾಗಿ ಎಲ್ಲರಿಗೂ ಒದಗಿಸುವುದಕ್ಕೆ ಆಗಿಲ್ಲ. ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ಕೆಲವು ಬಿತ್ತನೆ ಬೀಜಗಳನ್ನೂ ಕೂಡ ರೈತರಿಗೆ ಒದಗಿಸಬೇಕು ಅದನ್ನೂ ಕೂಡ ನಮ್ಮ ಫಾರಂನಲ್ಲಿ ಇಟ್ಟಿದ್ದೇವೆ, ವರ್ಷಂಪ್ರತಿ ತಯಾರು ಮಾಡುತ್ತಾ ಇದ್ದೇವೆ. ಮುಂದಿನ ವರ್ಷ ಸಂಸ್ಥಾನಕ್ಕೆ ಬೇಕಾಗಿರುವಷ್ಟು ಬೇಸಿಕ್ ಸೀಡನ್ನು ಪೂರ್ಣವಾಗಿ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ

ಶ್ರೀ ಎಸ್. ಕರಿಯಪ್ಪ.—ಜಪಾನ್‌ನಲ್ಲಿ 7 ರಿಂದ 9ರಷ್ಟು ರೆಂಡಿಟ್ಟಾ ಇದೆ. ನಮ್ಮ ದೇಶದಲ್ಲಿ ಸ್ವತಂತ್ರವಾಗಿ ಮಾಡತಕ್ಕ ಜನರಿಗೆ ಇದರಲ್ಲಿ ಕಂಡುಬರತಕ್ಕ ರೆಂಡಿಟ್ಟಾ 14 ರಿಂದ 16 ಇದೆ. ಸರ್ಕಾರದವರು ತಮ್ಮ ಫೀಲ್ಡ್‌ಆಫೀಸರ್‌ಗಳಲ್ಲಿ ಈ ರೆಂಡಿಟ್ಟಾವನ್ನು ಇಳಿಸಬೇಕಾದರೆ ಯಾವ ಯಾವ ಕಾರ್ಯಕ್ರಮಗಳನ್ನು ಆಲೋಚನೆ ಮಾಡಿದ್ದೀರಿ ಮತ್ತು ಎಷ್ಟು ದಿವಸದಲ್ಲಿ ಅದನ್ನು ಇಂಪ್ರೂವ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಭಾವಿಸಿದ್ದೀರಿ ?

ಶ್ರೀ ಬಿ. ರಾಚಯ್ಯ.—ಮೊದಲೇ ಹೇಳಿದ ಹಾಗೆ ಈ ದೇಶದಲ್ಲಿ ಉತ್ಪಾದನೆಯಾಗತಕ್ಕ ರೇಷ್ಮೆಯ ಗೂಡು ಸಿನಿದೆ ಅದನ್ನು ಒಳ್ಳೆಯ ಉತ್ತಮ ದರ್ಜೆಯ ಗೂಡುಗಳನ್ನಾಗಿ ಮಾಡಬೇಕು. 1 ಲಕ್ಷ 85 ಸಾವಿರ ಎಕರೆಯಲ್ಲಿ ರೈತರು ಬೆಳೆ ಮಾಡುತ್ತಾ ಇದ್ದಾರೆ ಅದ್ದರಿಂದ ಭೂಮಿಯನ್ನೂ ಕೂಡ ಉತ್ತಮ ಪಡಿಸಬೇಕು ಅದಕ್ಕೆ ಬೇಕಾದ ಒಳ್ಳೆಯ ಗೊಬ್ಬರ ಹಾಕಬೇಕು ಮತ್ತು ಸಾಕಾದಷ್ಟು ನೀರನ್ನು ಒದಗಿಸಬೇಕಾಗುತ್ತದೆ. ಈ ಎಲ್ಲಾ ಕಾರ್ಯಕ್ರಮಗಳನ್ನೂ ಕೈಕೊಂಡರೆ ಆಗ ಈ ರೆಂಡಿಟ್ಟಾ ಪರಿಣಾಮಕಾರಿಯಾಗಿ ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಇಲ್ಲದೇ ಇದ್ದರೆ ಸಾಧ್ಯವಾಗುವುದಿಲ್ಲ. ಕಕೂನ್ಸ್ ತೂಕದಲ್ಲಿ ಮತ್ತು ಅಳತೆಯಲ್ಲಿ ವ್ಯತ್ಯಾಸವಾಗುವುದನ್ನು ಕಡಿಮೆ ಮಾಡುವುದಕ್ಕೆ ಸಾಕಾಧಷ್ಟು ಕ್ರಮವನ್ನು ತೆಗೆದುಕೊಂಡಿದ್ದೇವೆ. ಒಟ್ಟಿನಲ್ಲಿ ರೆಂಡಿಟ್ಟಾ ಕಡಿಮೆ ಮಾಡಿದ ಪಕ್ಷದಲ್ಲಿ ಒಳ್ಳೆಯ ರೇಷ್ಮೆ ಉತ್ಪಾದನೆಯಾಗುತ್ತದೆ. ಅದಕ್ಕೆ ಹೊಸಮಾದರಿಯ ತಳಿಗಳನ್ನು, ಕಡ್ಡಿಗಳನ್ನು ರೈತರಿಗೆ ಹೆಚ್ಚಾಗಿ ಕೊಡಬೇಕಾಗಿದೆ ಮತ್ತು ಹೆಚ್ಚಾಗಿ ಕೆಮಿಕಲ್ ಮೆನ್ಯೂರ್‌ನ್ನೂ ಸಹ ಉಪಯೋಗಿಸುವುದಕ್ಕೆ ಪ್ರಚಾರ ಮಾಡಬೇಕಾಗಿದೆ.

ಶ್ರೀ ಟಿ. ಮಾದಯ್ಯ ಗೌಡ.—2 ಮತ್ತು 3ನೇ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ರೇಷ್ಮೆ ಇಲಾಖೆಯವರು ಈ ಅಭಿವೃದ್ಧಿಕಾರ್ಯಗಳಿಗೆ ಖರ್ಚು ಮಾಡಿದ ಹಣದಿಂದ ಎಷ್ಟುಮಟ್ಟಿಗೆ ಈ ರೆಂಡಿಟ್ಟಾ ಕಡಿಮೆ ಮಾಡುವುದಕ್ಕೆ ಸಾಧ್ಯವಾಯಿತು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ಈ ಯೋಜನೆಗಳಿಂದ ಉತ್ಪಾದನೆ ಹೆಚ್ಚಾಗಿದೆ. ಇನ್‌ಚೆನ್ಸಿವ್ ಕಲ್ಪನೇಷನ್ ತೆಗೆದುಕೊಳ್ಳದೇ ಇರುವುದರಿಂದ ರೆಂಡಿಟ್ಟಾ ಕಡಿಮೆ ಮಾಡುವದಕ್ಕೆ ಆಗಿಲ್ಲ ; ಆದರೆ ಗ್ರೇಡ್‌ನಲ್ಲಿ ಇನ್‌ಕ್ರೀಸ್ ಆಗಿದೆ ಮತ್ತು ರೇಷ್ಮೆ ಉತ್ಪಾದನೆ ದೇಶದಲ್ಲಿ ಎಷ್ಟು ಉತ್ಪಾದನೆ ಆಗುತ್ತಿತ್ತೋ ಅದಕ್ಕಿಂತ ಹೆಚ್ಚಾಗಿದೆ ಮತ್ತು ಗೂಡಿನ ಉತ್ಪಾದನೆಯೂ ಕೂಡ ಹೆಚ್ಚಾಗಿದೆ. ಒಳ್ಳೆಯ ಕ್ವಾಲಿಟಿ ಕಕೂನ್ ಪ್ರೊಡ್ಯೂಸ್ ಮಾಡುವುದಕ್ಕೆ ಆಗದೇ ಇರುವುದರಿಂದ ರೆಂಡಿಟ್ಟಾ ಕಡಿಮೆ ಆಗಿಲ್ಲ ಅದನ್ನು ಸರ್ವ ಪ್ರಯತ್ನಮಾಡಿ ಮಾಡುತ್ತೇವೆ ಎಂದು ಹೇಳಿದೆ.

ಶ್ರೀ ಎಸ್. ಕರಿಯಪ್ಪ.—ನೀರಿನ ಸೌಲಭ್ಯ ಬೇಕು ಗೊಬ್ಬರದ ಸೌಲಭ್ಯ ಬೇಕು ಇನ್ನೂ ಹಲವಾರು ಸೌಲಭ್ಯಗಳು ಬೇಕು ಅದನ್ನೆಲ್ಲಾ ಉಪಯೋಗಿಸಿದ ಪಕ್ಷದಲ್ಲಿ ಈ ರೆಂಡಿಟ್ಟಾವನ್ನು ಉತ್ತಮ ಪಡಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದಿರಿ. ಈ ನಿಟ್ಟಿನಲ್ಲಿ ಸರ್ಕಾರದವರು ಎಷ್ಟುಮಟ್ಟಿಗೆ ಬೆಳೆಗಾರರಿಗೆ ಸಹಾಯವನ್ನು ನೀಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಒಳ್ಳೆಯ ಗೂಡನ್ನು ಕೊಡತಕ್ಕದು ಮತ್ತು ತಾಂತ್ರಿಕ ವಿಷಯದಲ್ಲಿ ಅವರಿಗೆ ಒಳ್ಳೆಯ ಪರಿಜ್ಞಾನವನ್ನು ಕೊಡುವುದು ಮತ್ತು ರೈತರು ಬೆಳೆಯತಕ್ಕ ಗೂಡಿಗೆ ಒಳ್ಳೆಯ ಬೆಲೆ ಸಿಕ್ಕಬೇಕು ಎಂಬ ಉದ್ದೇಶದಿಂದ ಕಕೂನ್ ಮಾರ್ಕೆಟ್‌ಗಳನ್ನು ಕೂಡ ತೆಗೆದಿದ್ದೇವೆ ಮತ್ತು ಬೆಳೆಯುವವರಿಗೆ ಬೇಕಾಗಿರತಕ್ಕ ತಾಂತ್ರಿಕ ನೆರವು ಎಂದರೆ ಬಾಪಿ ತೆಗೆದುಕೊಳ್ಳುವುದಕ್ಕೆ ಸಾಲ ಬೇಕಾಗಿದ್ದರೆ ಸಾಲ ಕೊಡುತ್ತೇವೆ ಮತ್ತು ಇನ್ನೂ ಕೆಲವು ಕಡೆ ಸೀಡ್‌ಫಾರಿಯದಲ್ಲಿ ಚಂದ್ರಿಕೆಗಳನ್ನು ಕೊಡುತ್ತೇವೆ. ಹೀಗೆ ಕೆಲವಾರು ಸಣ್ಣಪುಟ್ಟ ಯೋಜನೆಗಳನ್ನು ಇಟ್ಟುಕೊಂಡು ಎಷ್ಟು ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಅಷ್ಟೂ ಕೂಡ ಮಾಡುತ್ತಾ ಇದ್ದೇವೆ. ಇನ್ನೂ ಹೆಚ್ಚು ಪೊಬಲಗನ್ನು ಕೊಟ್ಟರೆ ಅವನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ ; ಅವಕಾಶವಾಗುತ್ತದೆ.

Constitution of local committees at Taluk level to recommend to Government, the disposal of cultivable land.

*Q.—468. Sri M. C. BASAPPA (Chamarajanagar).—

Will the Government be pleased to state :—

(*a*) the date on which the local committees were constituted at Taluk level to recommend to Government the disposal of cultivable land to intending cultivators ;